# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಮೂರನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

## ಗುರುವಾರ, ದಿನಾಂಕ:18ನೇ ಜುಲೈ, 2024

## (ಸಮಯ: ಬೆಳಗ್ಗೆ 10.30 ಗಂಟೆಗೆ)

* * *

### 01. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಮೂರನೆಯ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಮೂರನೆಯ ಪಟ್ಟಿ

### 02. ಶೂನ್ಯವೇಳೆ ಪ್ರಸ್ತಾವಗಳು

### 03. ವರದಿಯನ್ನೊಪ್ಪಿಸುವುದು

**ಶ್ರೀ ಕೆ.ಎನ್. ರಾಜಣ್ಣ (ಅಧ್ಯಕ್ಷರು, ಪರಿಶೀಲನಾ ಸಮಿತಿ ಹಾಗೂ ಮಾನ್ಯ ಸಹಕಾರ ಸಚಿವರು)** ಅವರು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ ಹಾಗೂ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ಪರಿಶೀಲನಾ ಸಮಿತಿಯ ವರದಿಯನ್ನೊಪ್ಪಿಸುವುದು.

### 04. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ

| | |
|---|---|
| **ಶ್ರೀಯುತರುಗಳಾದ:- ಎನ್. ರವಿಕುಮಾರ್, ಸಿ.ಟಿ. ರವಿ, ಡಿ.ಎಸ್. ಅರುಣ್, ಭಾರತಿ ಶೆಟ್ಟಿ, ಎಸ್.ವ್ಹಿ. ಸಂಕನೂರ ಹಾಗೂ ಇತರರು** | ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು |

### 05. ಗಮನ ಸೆಳೆಯುವ ಸೂಚನೆಗಳು

01. **ಶ್ರೀ ಡಿ.ಎಸ್. ಅರುಣ್** ಅವರು 2022-23ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎಲ್ಲಾ ಲೆಕ್ಕಶೀರ್ಷಿಕೆಗಳಿಗೆ ಹಂಚಿಕೆಯಾದ ಹಣದಲ್ಲಿ ಬಳಕೆಯಾಗದೆ ಉಳಿದ ಅನುದಾನವನ್ನು ಸಂಚಿತ ನಿಧಿಗೆ ವರ್ಗಾವಣೆಗೊಳಿಸದೆ ಅಮಾನತ್ತು ಖಾತೆಯಲ್ಲೆ ಉಳಿಸಿರುವ ವಿಚಾರದ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದು.

..2..

02. **ಶ್ರೀ ಐವನ್ ಡಿ'ಸೋಜಾ** ಅವರು 1987ರಿಂದ 1994 ಮತ್ತು 95ನೇ ಶೈಕ್ಷಣಿಕ ಸಾಲಿನ ಒಳಗೆ ಪ್ರಾರಂಭವಾಗಿರುವ 118 ಶಾಲೆಗಳಿಗೆ ಸೀಮಿತವಾಗಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಆದೇಶವಾಗಿದ್ದರೂ ಅವುಗಳಲ್ಲಿ 07 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸದೇ ಇರುವ ಕುರಿತು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನ ಸೆಳೆಯುವುದು.

03. **ಶ್ರೀ ಪುಟ್ಟಣ್ಣ** ಅವರು ರಾಜ್ಯದಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ರಾಜ್ಯ ಪಠ್ಯಕ್ರಮದಲ್ಲಿ ಅನುಮತಿ ಪಡೆದು ಕೇಂದ್ರ ಪಠ್ಯಕ್ರಮದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುವ ಶಾಲೆಗಳನ್ನು ಅನಧಿಕೃತ ಶಾಲೆಗಳೆಂದು ಘೋಷಿಸುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿರುವ ಕುರಿತು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನ ಸೆಳೆಯುವುದು.

## 06. ನಿಯಮ 330ರ ಮೇರೆಗೆ

01. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರು ರಾಜ್ಯದ ಇತರೆ ಭಾಗಗಳಿಂದ ಕರಾವಳಿಗೆ ಸಂಪರ್ಕ ಕೊಂಡಿಯಾಗಿರುವ ಘಾಟಿ ಪರಿಸರದಲ್ಲಿ ಬರುವ ಹೆದ್ದಾರಿಯಲ್ಲಿ ಹೆಚ್ಚು ಮಳೆಯಿಂದಾಗಿ ರಸ್ತೆ ಕುಸಿತದಿಂದ ಸಂಚಾರ ವ್ಯತ್ಯಯ ಉಂಟಾಗುತ್ತಿರುವುದನ್ನು ತಪ್ಪಿಸಲು ಶಾಶ್ವತ ಮತ್ತು ದೀರ್ಘಕಾಲಿಕ ಉಪಯೋಗದ ಯೋಜನೆಯನ್ನು ಸರ್ಕಾರ ರೂಪಿಸದಿರುವ ಕುರಿತು ಪ್ರಸ್ತಾಪಿಸುವುದು.

02. **ಶ್ರೀ ಎಂ.ಎಲ್. ಅನಿಲ್ ಕುಮಾರ್** ಅವರು ಭೂರಹಿತರಿಗೆ ಹಾಗೂ ಬಡರೈತರಿಗೆ ಸರ್ಕಾರ ನೀಡಿರುವ ಭೂಮಿಗೆ ಪಹಣಿಯಲ್ಲಿ ಪಿ.ನಂ. ನಮೂದಿಸದಿರುವುದರಿಂದ ಹಾಗೂ ಸದರಿ ಭೂಮಿಯನ್ನು ಇತರರಿಗೆ ಪರಭಾರೆ ಮಾಡಲು ವಿಧಿಸಿರುವ ನಿರ್ಬಂಧವನ್ನು ಸಡಿಲಿಸದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವ ಕುರಿತು ಪ್ರಸ್ತಾಪಿಸುವುದು.

03. **ಶ್ರೀ ಯು.ಬಿ. ವೆಂಕಟೇಶ್** ಅವರು ಯುನೋಕಾಯಿನ್ ಟೆಕ್ನಾಲಜೀಸ್ ಕಂಪನಿ ಸರ್ವರ್ ಹ್ಯಾಕ್ ಮಾಡಿ ಕೋಟ್ಯಾಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್ ಕಳ್ಳತನ ಮಾಡಿದ ಸಂಘಟಿತ ಕೃತ್ಯದಲ್ಲಿನ ಆಪಾದಿತರು ಮತ್ತು ಹಗರಣದ ಬಗ್ಗೆ ಪ್ರಗತಿಯಲ್ಲಿರುವ ಸಿ.ಐ.ಡಿ. ವಿಚಾರಣೆ ಮತ್ತು ವರದಿ ಕುರಿತು ಪ್ರಸ್ತಾಪಿಸುವುದು.

04. **ಶ್ರೀ ಪಿ.ಹೆಚ್. ಪೂಜಾರ್ ಹಾಗೂ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರುಗಳು ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸುವುದು.

05. **ಶ್ರೀಯುತರುಗಳಾದ ಡಾ: ಧನಂಜಯ ಸರ್ಜಿ, ಶ್ರೀ ಎಸ್.ವ್ಹಿ. ಸಂಕನೂರ, ಕೆ.ಎ. ತಿಪ್ಪೇಸ್ವಾಮಿ, ಶಶೀಲ್ ಜಿ. ನಮೋಶಿ, ಗೋವಿಂದರಾಜು ಹಾಗೂ ಡಾ: ತಳವಾರ್ ಸಾಬಣ್ಣ** ಅವರುಗಳು ರಾಜ್ಯಾದ್ಯಂತ ಡೆಂಗ್ಯೂ ಖಾಯಿಲೆ ವ್ಯಾಪಕವಾಗಿ ಹರಡುತ್ತಿದ್ದು, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಪ್ರಸ್ತಾಪಿಸುವುದು.

06. **ಶ್ರೀ ಎಸ್.ವ್ಹಿ. ಸಂಕನೂರ ಹಾಗೂ ಶ್ರೀ ಪುಟ್ಟಣ್ಣ** ಅವರುಗಳು ರಾಜ್ಯದ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಉಚ್ಚನ್ಯಾಯಾಲಯ ತೀರ್ಪು ನೀಡಿದರೂ ಸಹ ಸರ್ಕಾರ ಅನುಮತಿಸದಿರುವುದರಿಂದ ಉಂಟಾಗಿರುವ ದುಷ್ಪರಿಣಾಮಗಳ ಕುರಿತು ಪ್ರಸ್ತಾಪಿಸುವುದು.

..3..

## 07. ಖಾಸಗಿ ಕಾರ್ಯಕಲಾಪಗಳು

<u>ಖಾಸಗಿ ನಿರ್ಣಯ</u>

**ಶ್ರೀ ಯು.ಬಿ. ವೆಂಕಟೇಶ್ ಅವರಿಂದ ಈ ಕೆಳಕಂಡ ಖಾಸಗಿ ನಿರ್ಣಯದ ಕುರಿತು ಮುಂದುವರೆದ ಚರ್ಚೆ:-**

"ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡುವ ಕುರಿತಂತೆ ಸಂವಿಧಾನಕ್ಕೆ ತಿದ್ದುಪಡಿ ತರುವ ಉದ್ದೇಶದ ಕುರಿತು" ಮಂಡಿಸಿರುವ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.

## 08. ಅರ್ಧ ಗಂಟೆ ಕಾಲಾವಧಿ ಚರ್ಚೆ

ಅ. ರಾಜ್ಯದ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಯಿಂದ ಉಂಟಾದ ಅನ್ಯಾಯದ ಬಗ್ಗೆ ದಿನಾಂಕ:15.07.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:04(54)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಐವನ್ ಡಿ'ಸೋಜಾ** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಿತರಿಸಿದ ವಸ್ತುಗಳ ಕುರಿತು ದಿನಾಂಕ:15.07.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:06(21)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಎನ್. ರವಿಕುಮಾರ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**

**www.kla.kar.nic.in/council/council.htm**